

ಸುಂದರ ಶಿಲ್ಪದಂತೆ ಕಾಣುವ 'ದಿ ಲೋನ್ಲಿ ಕ್ಯಾಸೆಲ್'

ಆದರೆ ದುಡ್ಡಿನೊಂದಿಗೆ ಬುದ್ಧಿವಂತಿಕೆಯೂ ಇಂಧನದಂತಿದೆ. ಅನಿಲ, ತೈಲ ಅಲ್ಲಿನವರ ಅತಿ ದೊಡ್ಡ ಆದಾಯ ಮೂಲ. ಆದರೆ ಅದರೊಂದಿಗೆ ಸಮಾನಾಂತರ ಆದಾಯದ ಅವಶ್ಯಕತೆಯನ್ನೂ ಮನಗಂಡಿರುವ ಅವರು, ಮೂರು ವರ್ಷದಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಮೂರು ವರ್ಷಗಳ ಹಿಂದೆ, ತಮ್ಮ ದೇಶವನ್ನು ಅಭಿವೃದ್ಧಿ ಮಾಡಬೇಕೆಂದು ರಾತ್ರೋರಾತ್ರಿ ನಿರ್ಧಾರ ಮಾಡಿದವರು ಇವರು. ನಮ್ಮ ದೇಶವನ್ನು ಇಡೀ ಜಗತ್ತು ನೋಡಬೇಕು, ಸೌದಿ ಬಗ್ಗೆ ಎಲ್ಲರೂ ಮಾತಾಡಬೇಕು ಎಂಬ ಅವರ ಮಹದಾಸೆಗೆ ಅವರ ಕಾರ್ಯಗಳೇ ಸಾಕ್ಷಿಯಂತೆ ನಿಂತಿವೆ.

ಪ್ರಕೃತಿಗೂ ಮನ್ನಣೆ ನೀಡಿರುವುದು ಅಲ್ಲಿನ ವಾಸ್ತುಶಿಲ್ಪದಲ್ಲಿ ಗೋಚರಿಸುತ್ತದೆ. ಮರಳುಗಾಡಿನಿಂದ ಆವೃತವಾಗಿದ್ದರೂ ಅವಕಾಶವಿದ್ದ ಕಡೆ ಹಸಿರಿಗೆ ಆದ್ಯತೆ ನೀಡುವ ಯೋಜಿತ ವಾಸ್ತುಶೈಲಿಯದು. ನೀರಿನ ಸಮಸ್ಯೆ ಇಲ್ಲದೇ, ತಾಪಮಾನ ನಿಯಂತ್ರಣ ಮಾಡಿ, ಎಲ್ಲಿ ಸಾಧ್ಯವೋ ಅಲ್ಲಿ ಪುಟ್ಟ ಹಸುರನ್ನು ಸೃಷ್ಟಿಸಿಕೊಳ್ಳುತ್ತಾರೆ.

## ಮನ ತಣಿಸಿದ ಆತಿಥ್ಯ

ಸೌದಿ ಅರೇಬಿಯಾ ಪ್ರವಾಸ ಎಂದಾಗ, ಹೆಣ್ಣುಮಕ್ಕಳಿಗೆ ಅಲ್ಲಿ ಬುರ್ಖಾ ಕಡ್ಡಾಯ, ಹೊರಗೆ ಓಡಾಡಲು ನಿರ್ಬಂಧ, ಸ್ವಾತಂತ್ರ್ಯ ಇಲ್ಲ ಎಂದೆಲ್ಲಾ ತಿಳಿದುಕೊಂಡಿದ್ದೆ. ಆದರೆ ಅಲ್ಲಿ ಬುರ್ಖಾ ಕಡ್ಡಾಯವಲ್ಲ! ಮೈತುಂಬಾ ಬಟ್ಟೆ ತೊಡಬೇಕು ಎಂಬ ನಿಯಮವಿದೆ. ಹೆಣ್ಣುಮಕ್ಕಳು ರಾಜಾರೋಷವಾಗಿ ಮಧ್ಯರಾತ್ರಿಯಲ್ಲಿಯೂ ತಿರುಗಾಡುತ್ತಾರೆ. ಅಂಥ ಭದ್ರತೆ ಹಾಗೂ ಸ್ವಾತಂತ್ರ್ಯ ಅಲ್ಲಿರುವುದನ್ನು ಕಂಡು ಖುಷಿಯಾಯಿತು.

ಅಲ್ಲಿನವರು ಮಾಂಸಪ್ರಿಯರು. ಅನ್ನ ಹಾಗೂ ಸೊಪ್ಪನ್ನು ಕೂಡ ಹೆಚ್ಚಾಗಿ ಬಳಸುತ್ತಾರೆ. ಸೌದಿಯ ಪ್ರತಿ ಮನೆಯಲ್ಲಿಯೂ ಅನ್ನ ಮಾಡುತ್ತಾರೆ ಎಂಬ ಸಂಗತಿ ದಕ್ಷಿಣ ಭಾರತೀಯರಿಗೆ ಹೇಗೆ ಖುಷಿ ತರದೇ ಇರಲು ಸಾಧ್ಯ? ಅಲ್ಲಿ ಸೊಪ್ಪು, ಅನ್ನ ಸೇವಿಸುತ್ತಿದ್ದರೆ, ನಮ್ಮ ಮನೆಯಲ್ಲೇ ಕುಳಿತು ಊಟ ಮಾಡಿದಂಥ ಅನುಭವ. ಭಾರತೀಯರನ್ನು ಹೋಲುವ ಮತ್ತೂ ಒಂದು ಅಂಶ ಎಂದರೆ ಕಾಫಿ ಸೇವನೆ. ದಿನಕ್ಕೆ ಹಲವು ಬಾರಿ ಕಾಫಿ ಕುಡಿಯುತ್ತಾರೆ.

ಭಾರತೀಯರೆಂದರೆ ಅಲ್ಲಿನವರಿಗೆ ವಿಶೇಷ ಪ್ರೀತಿ. ಭಾರತೀಯರು ಎಂದು ತಿಳಿಯುತ್ತಿದ್ದಂತೆ ವಿಶೇಷ ಆಸ್ಥೆಯಿಂದ ಮಾತಾಡಿಸುತ್ತಾರೆ. ಮನಸೋಇಚ್ಛೆ ಹೊಗಳುತ್ತಾರೆ. ನನ್ನನ್ನು ಸೆಳೆದ ಮತ್ತೊಂದು ಸಂಗತಿ, ಅವರ ಅತಿಥಿ ಸತ್ಕಾರ.

ಓಲ್ಡ್ ಟೌನ್ ಮಾರ್ಕೆಟ್ ಎಂಬ ಹಳೇ ಜಾಗಕ್ಕೆ ವಿಹಾರಕ್ಕೆ ಹೋದೆವು. ಅಲ್ಲಿ ಚಿಕ್ಕ ಸ್ಟಾಲ್ ಒಂದರಲ್ಲಿ ತಾಜಾ ಹಣ್ಣಿನ ಜ್ಯೂಸ್ ಮಾರಾಟ ಮಾಡಲಾಗುತ್ತಿತ್ತು. ನಾವು ಅಲ್ಲಿನ ಅತಿಥಿಗಳು ಎಂದು ತಿಳಿಯುತ್ತಿದ್ದಂತೆ ನಮ್ಮಿಂದ ಹಣವನ್ನೇ ತೆಗೆದುಕೊಳ್ಳಲಿಲ್ಲ. ಒಂದು ಸಲ ಅವರು ಹಣ ಬೇಡ ಎಂದರೆ ಒತ್ತಾಯ ಮಾಡಬಾರದು. ಹಾಗೆ ಮಾಡಿದರೆ ಅವರ ಆತಿಥ್ಯಕ್ಕೆ ಅವಮಾನ ಎಂದು ಭಾವಿಸುತ್ತಾರೆ. ರುಚಿ ನೋಡಲು ಕೆ.ಜಿ.ಗಟ್ಟಲೆ ಖರ್ಜೂರ ಕೊಡುತ್ತಿದ್ದ ವ್ಯಾಪಾರಸ್ಥರನ್ನು ನೋಡಿ ದಿಗ್ಭ್ರಮೆ ಮೂಡಿತು.

'ಮನುಷ್ಯನ ಹೊಟ್ಟೆ ತುಂಬುವುದಕ್ಕಿಂತ ಹೆಚ್ಚು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಅಕಸ್ಮಾತ್ ಹಾಗಾದರೆ ಆ ದುರಾಸೆ ಅವನನ್ನು ಹಾಳು ಮಾಡುತ್ತದೆ. ನಾವು ಕೊಟ್ಟರೆ ಅದರ ಹತ್ತು ಪಟ್ಟು ಹೆಚ್ಚಿನದನ್ನು ದೇವರು ವಾಪಸ್ ಕೊಡುತ್ತಾನೆ' ಎಂದು ಆ ವ್ಯಾಪಾರಿ ಹೇಳಿದ್ದು ಆಗಾಗ್ಗೆ ನೆನಪಿಗೆ ಬರುತ್ತಲೇ ಇರುತ್ತದೆ.

## ಅಭಿವೃದ್ಧಿಯ ಜಪ

ಅಲ್ಲಿನ ಜನ ತುಂಬಾ ರಿಲ್ಯಾಕ್ಸ್ ಆಗಿರುವಂತೆ ಕಾಣುತ್ತಾರೆ. ಟ್ರಾಫಿಕ್ ತಪ್ಪಿಸಲು ಸಾಕಷ್ಟು ನಡೆಯುತ್ತಾರೆ. ತುಂಬಾ ಮಜವಾಗಿ ಜೀವನ ಸಾಗಿಸುತ್ತಾರೆ. ಹಾಡು, ಸಂಗೀತವನ್ನು ಆಸ್ವಾದಿಸುತ್ತಾರೆ. ಇಡೀ ದೇಶದಲ್ಲಿ ಎಲ್ಲೂ ಮದ್ಯ ಸೇವನೆ ಇಲ್ಲ. ಬಾರ್ ಇದ್ದರೂ ಎಲ್ಲ ಡ್ರೈ ಬಾರ್. ಈ ವಿಷಯದಲ್ಲಿ ಭಾರೀ ಕಟ್ಟುನಿಟ್ಟು. ಎಷ್ಟೇ ಕಷ್ಟಪಟ್ಟರೂ ಒಂದು ಹನಿ ಮದ್ಯ ಸಿಗುವುದಿಲ್ಲ. ಮದ್ಯಪಾನ ಇಲ್ಲದೇ ಹೇಗೆ ಸಂತೋಷವಾಗಿ ಜೀವನ ಮಾಡಬಹುದು ಎಂಬುದನ್ನು ಅಲ್ಲಿ ನೋಡಬಹುದು.

ಕುಟುಂಬ ಆಧಾರಿತ ಬದುಕಿನ ಪರಿ ಅಲ್ಲಿಯದು. ಹಗಲು–ರಾತ್ರಿ ಎನ್ನದೇ ಹೊರಗೆ ಇರುತ್ತಾರೆ. ತುಂಬಾ ಶ್ರೀಮಂತ ದೇಶವೂ ಆಗಿರುವುದರಿಂದ ನೌಕರಿಗಾಗಿ ಹಲವು ದೇಶಗಳಿಂದ ಜನ ಬರುತ್ತಿದ್ದಾರೆ.

ಸೌದಿ ಪ್ರವಾಸ ನನಗೆ ಹಲವು ರೀತಿಯ ಹೊಸ ಅನುಭವಗಳನ್ನು ತಂದುಕೊಟ್ಟಿದೆ. ಅವೆಲ್ಲದರ ನಡುವೆ, ಈ ದೇಶದ ಅಭಿವೃದ್ಧಿಯ ಉಮೇದು ಬೆರಗನ್ನು ಉಳಿಸಿಬಿಡುತ್ತದೆ. ತಮ್ಮ ದೇಶದ ಭವಿಷ್ಯದ ಅವಶ್ಯಕತೆಗಳು, ಸವಾಲುಗಳು ಹಾಗೂ ಸಮಸ್ಯೆಗಳನ್ನು ತಿಳಿದುಕೊಂಡು ಇಂದೇ ಅದಕ್ಕೆ ಅವರು ಸನ್ನದ್ಧರಾಗುವ ಪರಿ ಆಶ್ಚರ್ಯ ಹುಟ್ಟಿಸುವಂಥದ್ದು.

ಪ್ರತಿಕ್ರಿಯಿಸಿ: feedback@sudha.co.in